# <u>ರಾಷ್ಟ್ರೀಯ ಸೇವಾ ಯೋಜನೆ ಘಟಕ</u>

## ಎನ್.ಎಸ್.ಎಸ್. ದೈನಂದಿನ ವಾರ್ಷಿಕ ವರದಿ – <u>೨೦೨೦–೨೧</u>

ಪ್ರಸಕ್ತ ಶೈಕ್ಷಣಿಕ ವರ್ಷದ ಎನ್.ಎಸ್.ಎಸ್ ಘಟಕದಡಿಯಲ್ಲಿ ವರ್ಷದುದ್ದಕ್ಕೂ ಹಮ್ಮಿಕೊಳ್ಳಲಾದ ವಿವಿಧ ಕಾರ್ಯಕ್ರಮಗಳ ಹಾಗೂ ಸ್ವಯಂಸೇವಕರು ಮಾಡಿದ ಶ್ರಮದಾನದ ಬಗ್ಗೆ ವರದಿಯನ್ನು ಸಂಕ್ಷಿಪ್ತವಾಗಿ ತಿಳಿಸಲಾಗುತ್ತಿದೆ. ಆರಂಭದಲ್ಲಿ ಆಸಕ್ತಿಯುಳ್ಳ ವಿದ್ಯಾರ್ಥಿಗಳ ಸಭೆ ಕರೆದು ಎನ್.ಎಸ್.ಎಸ್. ಬಗ್ಗೆ ತಿಳಿಸಿದಾಗ ಸ್ವಯಂ ಇಚ್ಛೆ ವ್ಯಕ್ತ ಪಡಿಸಿದ ೧೦೦ ವಿದ್ಯಾರ್ಥಿಗಳನ್ನು ಆಯ್ಕೆಮಾಡಲಾಯಿತು. ಎನ್.ಎಸ್.ಎಸ್. ಕಾರ್ಯಕ್ರಮ ಅಧಿಕಾರಿಗಳಾದ ಪ್ರೊ. ರವಿಕುಮಾರ ಕುರನಾಳ ಹಾಗೂ ಸಹ–ಕಾರ್ಯಕ್ರಮ ಅಧಿಕಾರಿಗಳಾದ ಶ್ರೀ ವಿಜಯಕುಮಾರ ತುಂಬದ ಅವರು "<u>ಆರೋಗ್ಯವಂತ ಭಾರತಕ್ಕೆ ಆರೋಗ್ಯವಂತ ಯುವಕರು</u>" ಎಂಬ ಶಿರೋನಾಮೆಯಡಿಯಲ್ಲಿ ದೈನಂದಿನ ಚಟುವಟಿಕೆಗಳನ್ನು ಆರಂಭಿಸಲಾಯಿತು.

ಜುಲೈ ಎರಡನೇ ವಾರದಿಂದ ಆರಂಭಗೊಂಡ ಕಾರ್ಯಚಟುವಟಿಕೆಗಳು ಸ್ವಯಂಸೇವಕರ ಉತ್ಸಾಹ ಮತ್ತು ಪಾಲ್ಗೊಳ್ಳುವಿಕೆನ್ನು ಹೆಚ್ಚಿಸಲು ಕಾರಣವಾದವು. ವರ್ಷದುದ್ದಕ್ಕೂ ದೈನಂದಿನ ಚಟುವಟಿಕೆಗಳಾದ ಕಾಲೇಜು ಆವರಣ ಸ್ವಚ್ಛತೆ, ಆಟದ ಮೈದಾನ ಸ್ವಚ್ಛತೆ, ವಿವಿಧ ದಿನಾಚರಣೆಗಳ ಆಚರಣೆ ಸಸಿ ನೆಡುವುದು, ಸಸಿಗಳಿಗೆ ನೀರು ಹಾಕುವುದು, ಆರ್.ವೀರಮಣಿ ಕ್ರಿಡಾಂಗಣ ಸ್ವಚ್ಛತೆ, ಈಜುಕೊಳದ ಸುತ್ತಲು ಶ್ರಮದಾನ, ಮತ್ತು ರಾಷ್ಟ್ರೀಯ ಹಬ್ಬಗಳ ಆಚರಣೆ ಇತ್ಯಾದಿಗಳನ್ನು ನಿರ್ವಹಿಸಲಾಯಿತು.

ದಿನಾಂಕ: ೧೧–೦೭–೨೦೨೦ ಮಧ್ಯಾಹ್ನ ೧೨.೨೦ ಗಂಟೆಗೆ ಎನ್.ಎಸ್.ಎಸ್. ಉದ್ಘಾಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಜಿ.ಮಲ್ಲಯ್ಯ ಅಧ್ಯಕ್ಷತೆಯಲ್ಲಿ, ಡಾ. ಎಸ್.ಜಿ. ಸಜ್ಜಲಗುಡ್ಡ ಮುಖ್ಯ ಅತಿಥಿಗಳಾಗಿ ಆಗಮಿಸಿ ಎನ್.ಎಸ್.ಎಸ್. ಹಾಕಿಕೊಂಡಿರುವ ಗುರಿ–ಉದ್ದೇಶಗಳು ಯಶಸ್ವಿಯಾಗಬೇಕಾದರೆ ಸ್ವಯಂ ಸೇವಕರ ಸ್ವಯಂಸ್ಫೂರ್ತಿಯಿಂದ ಕಾಯಾ–ವಾಚಾ–ಮನಸಾ ಕಾರ್ಯಪ್ರವರ್ತರಾಗಬೇಕು. ಜೀವನದುದ್ದಕ್ಕೂ ಸೇವಾ ಮನೋಭಾವನೆ ಬೆಳೆಸಿಕೊಂಡು ರಾಷ್ಟ್ರದ ಸೇವೆಯಲ್ಲಿ ತಾವೆಲ್ಲರೂ ತೊಡಗಿಸಿಕೊಳ್ಳಬೇಕೆಂದು ತಿಳಿಸಿದರು.

ದಿನಾಂಕ: ೧೧–೦೭–೨೦೨೦ ರಂದು "ವಿಶ್ವ ಜನಸಂಖ್ಯಾ ದಿನಾಚರಣೆ"ಯನ್ನು ಆಚರಿಸಲಾಯಿತು. ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಜಿ.ಮಲ್ಲಯ್ಯ ಅಧ್ಯಕ್ಷತೆಯಲ್ಲಿ ಮತ್ತು ಡಾ. ಎಮ್.ಜಿ.ಬಂಗಾರಿ ಮುಖ್ಯ ಅತಿಥಿಗಳಾಗಿ ಆಗಮಿಸಿ "ವಿಶ್ವ

ಜನಸಂಖ್ಯಾ ದಿನಾಚರಣೆ" ಪ್ರಯುಕ್ತ ಮಾತನಾಡಿ ಜನಸಂಖ್ಯೆ ಎಂಬುದು ಶಕ್ತಿಯಾಗಬೇಕು. ದೇಶದ ಏಳಿಗೆಯಲ್ಲಿ ಉತ್ತಮ ಪಾತ್ರ ವಹಿಸಬೇಕೆಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಮಾಜಿ ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳಾದ ಡಾ. ಎಸ್.ಜಿ. ಸಜ್ಜಲಗುಡ್ಡ ಹಾಗೂ ಡಾ.ಸುಮಂಗಲಾ ಮೇಟಿ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು.

ದಿನಾಂಕ: ೨೫–೦೭–೨೦೨೦ ರಂದು "ಹಡಪದ ಅಪ್ಪಣ್ಣ" ರವರ ಭಾವಚಿತ್ರಕ್ಕೆ ಹಾರವನ್ನು ಹಾಕಿ ಪೂಜೆ ಸಲ್ಲಿಸುವುದರೊಂದಿಗೆ ಎನ್.ಎಸ್.ಎಸ್ ಕಛೇರಿ ಮುಂಭಾಗದಲ್ಲಿ ಜಯಂತಿಯನ್ನು ಆಚರಿಸಲಾಯಿತು. ಪ್ರೊ. ಗುಗ್ಗರಿ, ಪ್ರೊ.ದೇವಿಂದ್ರಪ್ಪ ಶ್ರೀ ವಿಜಯಕುಮಾರ ತುಂಬದ ಹಾಗೂ ಎನ್.ಎಸ್.ಎಸ್ ಸ್ವಯಂಸೇವಕರು ಉಪಸ್ಥಿತರಿದ್ದರು.

ದಿನಾಂಕ: ೨೬–೦೭–೨೦೨೦ ರಂದು "ಕಾರ್ಗಿಲ್ ವಿಜಯೋತ್ಸವ ದಿನ"ವನ್ನು ಮಹಾವಿದ್ಯಾಲಯದ ಚೇರಮನ್ನರಾದ ಡಾ!! ಕೆ.ವಿ. ಅಕ್ಕಿ, ಅಧ್ಯಕ್ಷತೆಯಲ್ಲಿ ಪ್ರಾಚಾರ್ಯರಾದ ಡಾ. ಜಿ.ಮಲ್ಲಯ್ಯ ಉಪಸ್ಥಿತಿಯಲ್ಲಿ ಆಚರಿಸಲಾಯಿತು. ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ನಿವೃತ್ತ ಬಾಹ್ಯಾಕಾಶ ಸೇನೆಯ ಸಾರ್ಜಂಟ್. ನಾರಾಯಣ ಏಕಬೋಟೆ ಆಗಮಿಸಿ ಸೈನಿಕರ ಬಲದಾನ ಹಾಗೂ ಕಾರ್ಗಿಲ್ ಯುದ್ದದ ಎಲ್ಲ ಸನ್ನಿವೇಶಗಳ ಬಗೆಗೆ ವಿವರಿಸಿದರು.

ದಿನಾಂಕ: ೦೧–೦೮–೨೦೨೦ ರಂದು ಡಾ. ಮಹಾಂತ ಶ್ರೀಗಳ ಜನ್ಮದಿನವನ್ನು ಸರ್ಕಾರ "ವ್ಯಸನಮುಕ್ತ ದಿನಾಚರಣೆ"ಯನ್ನಾಗಿ ಆಚರಿಸಲು ಆದೇಶಿಸಿತ್ತು. ಇದರ ಪ್ರಯುಕ್ತವಾಗಿ ಡಾ. ಮಹಾಂತ ಶ್ರೀಗಳ ಭಾವಚಿತ್ರಕ್ಕೆ ಹಾರವನ್ನು ಹಾಕಿ ಪೂಜೆ ಸಲ್ಲಿಸುವುದರೊಂದಿಗೆ ವ್ಯಸನಮುಕ್ತ ದಿನಾಚರಣೆ ಆಚರಿಸಲಾಯಿತು.

ದಿನಾಂಕ: ೧೫–೦೮–೨೦೨೦ ರಂದು ನಮ್ಮ ರಾಷ್ಟ್ರೀಯ ಹಬ್ಬವಾದ ಸ್ವಾತಂತ್ರ್ಯ ದಿನಾಚರಣೆಯನ್ನು ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಜಿ.ಮಲ್ಲಯ್ಯ ಅವರು ಧ್ವಜಾರೋಹಣ ಮಾಡುವ ಮೂಲಕ ನೆರವೇರಿಸಿದರು. ನಂತರ ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳೆಲ್ಲರೂ ರಾಷ್ಟ್ರಪ್ರೇಮ, ರಾಷ್ಟ್ರಭಕ್ತಿ ಬೆಳೆಸಿಕೊಳ್ಳುವ ಮೂಲಕ ರಾಷ್ಟ್ರಕ್ಕೆ ಸ್ವಾತಂತ್ರ್ಯ ಒದಗಿಸಿಕೊಟ್ಟ ಮಹಾನ್ ನಾಯಕರ ಆದರ್ಶಗಳನ್ನು ಪಾಲಿಸುವಂತೆ ಕರೆ ನೀಡಿದರು. ನಂತರ ಎನ್.ಎಸ್.ಎಸ್. ಸ್ವಯಂಸೇವಕರಿಗೆ ಅಲ್ಪೋಪಹಾರ ವಿತರಿಸಲಾಯಿತು.

ದಿನಾಂಕ: ೦೫-೦೯-೨೦೨೦ ರಂದು ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಗುರುಗಳು ತಮ್ಮ ವಿಚಾರಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು. ವಿದ್ಯಾರ್ಥಿಗಳಿಗೆ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಲು ಕರೆ ನೀಡಿದರು ಇತ್ತೀಚಿನ ಸಮಾಜದಲ್ಲಿ ಗುರುಗಳಿಗೆ ಇರುವ ಸ್ಥಾನಮಾನ ಕುಸಿಯುತ್ತಿದೆ. ಕಾರಣ ತಾವುಗಳು ಉತ್ತಮ ಶಿಕ್ಷಕರ ಗುಣಗಳನ್ನು ಅಳವಡಿಸಿಕೊಂಡು ತಮ್ಮ ಭವಿಷ್ಯ ಉಜ್ವಲವಾಗಿಸಿಕೊಳ್ಳುವಂತೆ ತಿಳಿಸಿದರು.

೨೪-೦೯-೨೦೨೦ ರಂದು ಎನ್.ಎಸ್.ಎಸ್. ದಿನಾಚರಣೆ ಆಚರಿಸಲಾಯಿತು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ಜಿ.ಮಲ್ಲಯ್ಯರವರು ರಾಷ್ಟ್ರಾಭಿವೃದ್ಧಿ ಮತ್ತು ಗ್ರಾಮೀಣ ಜನರಿಗೆ ಜಾಗೃತಿ ಮೂಡಿಸುವಲ್ಲಿ ಎನ್.ಎಸ್.ಎಸ್. ಪಾತ್ರ ಅಮೋಘವಾಗಿದೆ ಎಂದರು.

ದಿನಾಂಕ: ೦೨-೧೦-೨೦೨೦ ರಂದು ರಾಷ್ಟ್ರ ಪಿತಾಮಹ ಮಹಾತ್ಮ ಗಾಂಧೀಜಿಯವರ ಮತ್ತು ಲಾಲ್ ಬಹದ್ದೂರ ಶಾಸ್ತ್ರೀಯವರ ಜನ್ಮ ಜಯಂತಿಯನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾದ ಪ್ರೊ. ಎಸ್.ವಿ.ಕಂಬಿ ಮತ್ತು ಪ್ರೋ. ಪಿ.ಎಸ್. ಸುಣಗಾರ ರವರು ಆಗಮಿಸಿ ಮಹಾತ್ಮ ಗಾಂಧೀಜಿಯವರ ಜೀವನದ ಸಾದನೆಗಳನ್ನು ಹಾಗೂ ಅವರು ಅನುಸರಿಸಿದ ಜೀವನದ ಮಾರ್ಗಗಳಾದ ಸತ್ಯ ಮತ್ತು ಅಹಿಂಸೆ ಬಗ್ಗೆ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ಹೇಳಿದರು. ನಂತರ ಲಾಲ್ ಬಹದ್ದೂರ ಶಾಸ್ತ್ರೀಜಿಯವರಂತಹ ನಿಸ್ವಾರ್ಥ ಮನೋಭಾವನೆಯನ್ನು ಹೊಂದಿದ ರಾಜಕಾರಣಿಗಳು ಇರುವುದು ಅಪರೂಪವಾಗಿದೆ. ಕಾರಣ ರಾಷ್ಟ್ರ ಭವಿಷ್ಯವನ್ನು ನಿರ್ಮಿಸುವ ತಾವೆಲ್ಲರೂ ಉತ್ತಮ ನಾಗರಿಕರಾಗಬೇಕೆಂದು ಕರೆ ನೀಡಿದರು.

ದಿನಾಂಕ: ೩೧-೧೦-೨೦೨೦ ರಂದು ಸರದಾರ ವಲ್ಲಬಾಯಿ ಪಟೇಲ ಜನ್ಮದಿನದ ಅಂಗವಾಗಿ "ರಾಷ್ಟ್ರೀಯ ಏಕತಾ ದಿನಾಚರಣೆ" ಯನ್ನು ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಜಿ.ಮಲ್ಲಯ್ಯ ಅಧ್ಯಕ್ಷತೆಯಲ್ಲಿ ಹಾಗೂ ಪ್ರೋ. ಎಸ್.ವಿ. ಕಂಬಿ ಮುಖ್ಯ ಅತಿಥಿಗಳಾಗಿ ಆಗಮಿಸಿ "ರಾಷ್ಟ್ರೀಯ ಏಕತಾ ದಿನಾಚರಣೆ" ಪ್ರಯುಕ್ತ ಮಾತನಾಡಿ ಸರದಾರ ವಲ್ಲಬಾಯಿ ಪಟೇಲರು ಅನೇಕ ಸಂಸ್ಥಾನಗಳ ವಶದಲ್ಲಿದ್ದ ಭಾರತವನ್ನು ಒಗ್ಗೂಡಿಸಿ ಅಖಂಡ ಭಾರತವನ್ನು ನಿರ್ಮಾಣ ಮಾಡಿದ ಬಗೆಗೆ ವಿವರಿಸಿ ರಾಷ್ಟ್ರದ ಏಕತೆಗೆ ಶ್ರಮಿಸುವಂತೆ ಕರೆ ನೀಡಿದರು.

ದಿನಾಂಕ: ೦೧–೧೧–೨೦೨೦ ರಂದು ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಜಿ.ಮಲ್ಲಯ್ಯ ಅಧ್ಯಕ್ಷತೆಯಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಎಲ್ಲ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರು ಹಾಜರಿದ್ದರು.

ದಿನಾಂಕ: ೦೧–೧೧–೨೦೨೦ ರಂದು ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಜಿ.ಮಲ್ಲಯ್ಯ ಅಧ್ಯಕ್ಷತೆಯಲ್ಲಿ ಕನಕದಾಸ ಜಯಂತಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಎಲ್ಲ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರು ಹಾಜರಿದ್ದರು.

ದಿನಾಂಕ: ೧೨–೦೧–೨೦೨೦ ರಂದು ಸ್ವಾಮಿ ವಿವೇಕಾನಂದರ ಜನ್ಮದಿನದ ಪ್ರಯುಕ್ತ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಜಿ.ಮಲ್ಲಯ್ಯ ಅಧ್ಯಕ್ಷತೆಯಲ್ಲಿ ಯುವಕರ ದಿನಾಚರಣೆ ಆಚರಿಸಲಾಯಿತು ಕಾರ್ಯಕ್ರಮದಲ್ಲಿ ಎಲ್ಲ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರು ಹಾಜರಿದ್ದರು.

ದಿನಾಂಕ ೨೩–೦೧–೨೦೨೧ರಂದು ಸುಭಾಸ್ ಚಂದ್ರ ಬೋಸ್ ಜಯಂತಿ ನಿಮಿತ್ಯ ಪರಾಕ್ರಮ ದಿವಸ ಆಚರಿಸಲಾಯಿತು.. ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಜಿ.ಮಲ್ಲಯ್ಯ, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರು ಹಾಗೂ ಎನ್.ಎಸ್.ಎಸ್. ಸ್ವಯಂ ಸೇವಕರು ಪಾಲ್ಗೊಂಡಿದ್ದರು.

ದಿನಾಂಕ ೨೫–೦೧–೨೦೨೧ರಂದು ಮತದಾನ ಜಾಗ್ರುತಿ ಜಾಥಾ ಹಾಗೂ ಉಪನ್ಯಾಸ ಕಾರ್ಯಕ್ರಮವನ್ನು ತಾಲುಕಾ ಕಚೇರಿ, ತಹಶೀಲ್ದಾರರ ಸಹಯೊಗದೊಂದಿಗೆ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಜಿ.ಮಲ್ಲಯ್ಯ, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರು ಹಾಗೂ ಎನ್.ಎಸ್.ಎಸ್. ಸ್ವಯಂ ಸೇವಕರು ಪಾಲ್ಗೊಂಡಿದ್ದರು.

ದಿನಾಂಕ: ೨೬–೦೧–೨೦೨೧ ರಂದು ಗಣರಾಜ್ಯೋತ್ಸವ ದಿನಾಚರಣೆ ಆಚರಿಸಲಾಯಿತು. ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಜಿ.ಮಲ್ಲಯ್ಯ ಅವರು ದೇಶಕ್ಕೆ ಸ್ವಾತಂತ್ರ್ಯ ಒದಗಿಸಿಕೊಟ್ಟ ಮಹಾನ್ ನಾಯಕರ ಆದರ್ಶ ತತ್ವಗಳನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ನಮಗೆ ದೊರಕಿಸಿಕೊಟ್ಟ ಸ್ವಾತಂತ್ರ್ಯ ಯಾವುದೇ ಕಾರಣಕ್ಕೂ

ತೊಂದರೆಗೊಳಗಾಗದಂತೆ ಸಂವಿಧಾನಾತ್ಮಕವಾಗಿ ಜೀವನವನ್ನು ನಡೆಸಲು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಎಲ್ಲಾ ಎನ್.ಎಸ್.ಎಸ್. ಸ್ವಯಂ ಸೇವಕರು ಪಾಲ್ಗೊಂಡಿದ್ದರು.

ದಿನಾಂಕ ೧೩-೦೨-೨೦೨೧ ರಂದು ೩೨ ನೇ ರಸ್ತೆ ಸುರಕ್ಷತಾ ಮಾಸಿಕ – ರಸ್ತೆ ಸುರಕ್ಷ ಜೀವನ್ ರಕ್ಷ ಪೊಲೀಸ್ ಠಾಣೆ ಇಳಕಲ್, ಸಿ ಪಿ ಐ ಹುನಗುಂದ, ಭಾರತೀಯ ವೈದ್ಯಕೀಯ ಸಂಘಟನೆ, ಲಯನ್ಸ್ ಕ್ಲಬ್ ಇಳಕಲ್ ಸಹಯೋಗದೊಂದಿಗೆ ಜಾಗ್ರುತಿ ಜಾಥಾ ಹಾಗೂ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ದಿನಾಂಕ: ೧೫-೦೨-೨೦೨೧ ರಂದು ಸೇವಾಲಾಲ ಜಯಂತಿಯನ್ನು ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಜಿ.ಮಲ್ಲಯ್ಯ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಎಲ್ಲ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರು ಹಾಜರಿದ್ದರು.

ದಿನಾಂಕ ೧೭-೦೨-೨೦೨೧ ರಂದು ಗುಲಾಬಿ ಆಂದೋಲನ – ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮವನ್ನು ಜಿಲ್ಲಾ ಆಡಳಿತ, ಜಿಲ್ಲ ಕಾನೂನು ಪ್ರಾಧಿಕಾರ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಾಗಲಕೋಟ ಸಹಯೊಗದೊಂದಿಗೆ ಎನ್.ಎಸ್.ಎಸ್ ಸ್ವಯಂಸೇವಕರು ಇಲಕಲ್ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ದುಶ್ಚಟಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ಘೋಷಣೆ ಕೂಗುತ್ತಾ ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಮಾಡಿದರು.

ದಿನಾಂಕ ೦೮-೦೩-೨೦೨೧ ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಜಿ.ಮಲ್ಲಯ್ಯ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಎಲ್ಲ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರು ಹಾಜರಿದ್ದರು.

ದಿನಾಂಕ: ೧೪-೦೪-೨೦೨೧ ರಂದು ಡಾ . ಬಾಬಾ ಸಾಹೇಬ ಅಂಬೇಡ್ಕರ್ ಜಯಂತಿಯನ್ನು ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಜಿ.ಮಲ್ಲಯ್ಯ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಎಲ್ಲ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರು ಹಾಜರಿದ್ದರು.

ದಿನಾಂಕಃ ೧೪-೦೫-೨೦೨೧ ರಂದು ಬಸವ ಜಯಂತಿಯನ್ನು ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಜಿ.ಮಲ್ಲಯ್ಯ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಎಲ್ಲ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರು ಹಾಜರಿದ್ದರು.

ದಿನಾಂಕ ೧೫-೦೫-೨೦೨೧ ರಂದು ರಕ್ತದಾನ – ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಪದ್ಮಶ್ರೀ ಡಾ. ಬಿ ಆರ್ ಪಾಟೀಲ್ ಕ್ಯಾನ್ಸರ್ ಆಸ್ಪತ್ರೆ, ಕರ್ನಾಟಕ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ ನವನಗರ ಹುಬ್ಬಳ್ಳಿಗೆ ಎನ್ ಎಸ್ ಎಸ್ ಕಾರ್ಯಕ್ರಮಾಧಿಕಾರಿಗಳು ಹಾಗೂ ೪ ಸ್ವಯಂ ಸೇವಕರು ತೆರಳಿ ಕ್ಯನ್ಸರ್‌ನಿಂದ ಬಳಲುತ್ತಿದ್ದ ವ್ಯಕ್ತಿಗೆ ರಕ್ತದಾನ ಮಾಡಲಾಯಿತು.

ದಿನಾಂಕಃ ೨೧-೦೫-೨೦೨೧ ರಂದು ಭಯೋತ್ಪಾದನಾ ವಿರೋಧಿ ದಿನಾಚರಣೆ ಯನ್ನು ಮಹಾವಿದ್ಯಾಲಯದ ಪ್ರಾಚಾರ್ಯರಾದ ಜಿ.ಮಲ್ಲಯ್ಯ ಅಧ್ಯಕ್ಷತೆಯಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಲಾಯಿತು. ಕಾರ್ಯಕ್ರಮದಲ್ಲಿ ಎಲ್ಲ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರು ಹಾಜರಿದ್ದರು.

ದಿನಾಂಕ ೦೫-೦೬-೨೦೨೧ ರಂದು ಅಂತರಾಷ್ಟ್ರೀಯ ಪರಿಸರ ದಿನಾಚರಣೆ ಪ್ರಯುಕ್ತ ಪರಮ ಪೂಜ್ಯ ಶ್ರೀ ಗುರು ಮಹಾಂತ ಸ್ವಾಮಿಗಳು, ಸಂಘದ ಚೇರಮನ್ನರು, ಮಹಾವಿದ್ಯಾಲಯದ ಚೇರಮನ್ನರು, ಪ್ರಾಚಾರ್ಯರು ಹಾಗೂ ಸಿಬ್ಬಂದಿ ವರ್ಗದವರು ಸೇರಿಕೊಂಡು ಸಸಿ ನಡೆಸುವುದರ ಮೂಲಕ ಆಚರಿಸಲಾಯಿತು.

ದಿನಾಂಕ ೩೦-೦೬-೨೦೨೧ ರಿಂದ ದಿ. ೦೪-೦೭-೨೦೨೧ ರವರೆಗೆ ಕೊವಿಡ್ ಲಸಿಕಾ ಅಭಿಯಾನವನ್ನು ಹಮ್ಮಿಕೊಂಡು ಮಹಾವಿದ್ಯಾಲಯದ ಭೋದಕ ಭೋದಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿಗೆ ಕೋವಿಡ್ ಲಸಿಕೆಯನ್ನು ಹಾಕಿಸಲಾಯಿತು.

೨೦೨೦-೨೧ನೇ ಸಾಲಿನಲ್ಲಿ ಹಮ್ಮಿಕೊಂಡ ಹಲವಾರು ಕಾರ್ಯಚಟುವಟಿಕೆಗಳಲ್ಲಿ ಎನ್.ಎಸ್.ಎಸ್. ಸ್ವಯಂ ಸೇವಕರು ಸಕ್ರೀಯವಾಗಿ ಪಾಲ್ಗೊಳ್ಳವ ಮೂಲಕ ಯಶಸ್ವಿಗೊಳಿಸಿದರು. ಎಲ್ಲಾ ಯಶಸ್ವಿಗೆ ಸಹಕರಿಸಿದ ಮಹಾವಿದ್ಯಾಲಯದ ಚೇರಮನ್ನರಿಗೆ, ಪ್ರಾಚಾರ್ಯರಿಗೆ, ಭೋದಕ ಹಾಗೂ ಭೋದಕೇತರ ಸಿಬ್ಬಂದಿಯವರಿಗೆ ಹಾಗೂ ಸ್ವಯಂಸೇವಕರಿಗೆ ಹೃದಯಪೂರ್ವಕ ವಂದನೆಗಳು.

NSS PROGRAM OFFICER
S V M. Arts Science And Commerce
College, ILKAL-587125

ಪ್ರಾಂಶುಪಾಲರು
ಶ್ರೀ ವಿಜಯ ಮಹಾಂತೇಶ ಕಲೆ, ವಿಜ್ಞಾನ
ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಇಲಕಲ್ಲ